# ಕರ್ನಾಟಕ ಸರ್ಕಾರ

ಗ್ರಾಅಪ 225 ಗ್ರಾಪಂಅ 2020

ಕರ್ನಾಟಕದ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು. ದಿನಾಂಕ:28-02-2020

## ಸುತ್ತೋಲೆ

**ವಿಷಯ:** ಅಂತರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಗ್ರಾಮ ಪಂಚಾಯಿತಿ ಹಂತದಲ್ಲಿ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸುವ ಕುರಿತು.

**ಉಲ್ಲೇಖ:**

1. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ:3ಹೆಚ್
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 364 ಗ್ರಾಪಂಅ 2014, ದಿನಾಂಕ: 12/06/2014.
3. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಪತ್ರ ಸಂಖ್ಯೆ: M-11015/48/2020-CB, ದಿನಾಂಕ 21/02/2020.

******

ಗ್ರಾಮ ಪಂಚಾಯಿತಿಗಳು ಸ್ಥಳೀಯ ಸ್ವಯಂ ಸರ್ಕಾರವಾಗಿದ್ದು, ಗ್ರಾಮ ಸಭೆಗಳು ಗ್ರಾಮದ ವಿಧಾನ ಸಭೆಯಾಗಿ ಕಾರ್ಯನಿರ್ವಹಿಸುತ್ತಿವೆ. ಗ್ರಾಮದ ಮತದಾರರ ಹಾಗೂ ನಾಗರೀಕರ ಅಗತ್ಯತೆಗಳನ್ನು ಮತ್ತು ಅವಶ್ಯಕತೆಗಳನ್ನು ಆಲಿಸುವ ಮತ್ತು ಸೌಕರ್ಯಗಳನ್ನು ಒದಗಿಸುವ ಸರ್ಕಾರವಾಗಿದೆ. ಗ್ರಾಮದ ಸರಿಸುಮಾರು ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ಸಾಮಾಜಿಕ ಕಟ್ಟುಪಾಡುಗಳಿಂದಾಗಿ ಸಾಮಾನ್ಯ ಗ್ರಾಮ ಸಭೆಗಳಲ್ಲಿ ಕಡಿಮೆ ಸಂಖ್ಯೆಗಳಲ್ಲಿ ಭಾಗವಹಿಸುತ್ತಿದ್ದು, ಮಹಿಳೆಯರ ಅಗತ್ಯತೆಗಳು ಮತ್ತು ಬೇಡಿಕೆಗಳು ನಿರೀಕ್ಷಿತ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದಿಲ್ಲ. ಇದರ ಪರಿಣಾಮವಾಗಿ ಮಹಿಳೆಯರು ಸ್ಥಳೀಯ ಸರ್ಕಾರದ ನಿರ್ಣಯಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯವಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ (1) ರ ಅಧಿನಿಯಮದ ಪ್ರಕರಣ:3-ಹೆಚ್ ರನ್ವಯ ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖ(2)ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಗಳನ್ನು ಕಡ್ಡಾಯವಾಗಿ ಆಯೋಜಿಸುವಂತೆ ಸೂಚಿಸಿ, ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಅನುಬಂಧವನ್ನು ಹೊರಡಿಸಿ, ಮಹಿಳೆಯರಿಗಾಗಿ ಒಂದು ವೇದಿಕೆಯನ್ನು ಸಿದ್ಧಪಡಿಸಿದೆ. ಇದರ ಮುಂದುವರೆದ ಭಾಗವಾಗಿ, ಪ್ರಸಕ್ತ ಸಾಲಿನ ಅಂತರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 08ನ್ನು ವಿಶೇಷವಾಗಿ ಆಚರಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯು ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸಲು ಉದ್ದೇಶಿಸಿದೆ.

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಉಲ್ಲೇಖ (3) ರಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ "ಪೋಷಣ್ ಪಕ್ವಾಡ" ಗಳನ್ನು ಆಯೋಜಿಸುವಂತೆ ಸೂಚಿಸಿದೆ ಹಾಗೂ ಈ ಸಂದರ್ಭದಲ್ಲಿ ಪೋಷಣ್ ಅಭಿಯಾನದಡಿ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸಿ ಸೂಚಿಸಿದೆ. ಮುಂದುವರೆದು ಗ್ರಾಮೀಣ ಪ್ರದೇಶಗಳಲ್ಲಿ ಗರ್ಭಿಣಿ ಮಹಿಳೆಯರನ್ನು ಗುರುತಿಸುವುದು, ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ಆಹಾರ ಪದ್ಧತಿಯಡಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಪೌಷ್ಠಿಕ ಆಹಾರಗಳನ್ನು ಗುರುತಿಸುವುದು, ಅಂಗನವಾಡಿ ಕೇಂದ್ರಗಳಲ್ಲಿ ವಿವವಿಧ ಫಲಾನುಭವಿಗಳಿಗೆ ವಿತರಿಸಲು ಲಭ್ಯವಿರುವ ಪೂರಕ ಪೌಷ್ಠಿಕ ಆಹಾರ ಇತ್ಯಾದಿ ವಿಷಯಗಳ ಬಗ್ಗೆ "ಪೋಷಣ್ ಪಕ್ವಾಡ" ಅಡಿಯಲ್ಲಿ ಆಯೋಜಿಸಲಾಗುವ ವಿಶೇಷ ಮಹಿಳಾ ಗ್ರಾಮ ಸಭೆಗಳಲ್ಲಿ ಚರ್ಚಿಸುವಂತೆ ಸೂಚಿಸಿದೆ.

ಮೇಲ್ಕಂಡ ವಿಷಯಗಳೊಂದಿಗೆ ಮಹಿಳೆಯರಿಗಾಗಿ ಸರ್ಕಾರವು ಕಾರ್ಯರೂಪಕ್ಕೆ ತಂದಿರುವ ಮಾತೃಪೂರ್ಣ, ಮಾತೃವಂದನಾ, ಮಾತೃಶ್ರೀ ಮುಂತಾದ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ಹಾಗೂ ಮಹಿಳೆಯರ ಭಾಗವಹಿಸುವಿಕೆಯೊಂದಿಗೆ ಸರ್ಕಾರವು ಕಾರ್ಯರೂಪಕ್ಕೆ ತಂದಿರುವ ಮಾತೃಪೂರ್ಣ, ಮಾತೃವಂದನಾ, ಮಾತೃಶ್ರೀ ಮುಂತಾದ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ಹಾಗೂ ಮಹಿಳೆಯರ ಭಾಗವಹಿಸುವಿಕೆಯೊಂದಿಗೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕಾಗಿರುತ್ತದೆ. ಇದಲ್ಲದೆ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಅದರ ತಿದ್ದುಪಡಿಗಳು, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ ಅವರು ಶಾಲೆಗಳಲ್ಲಿ ಹಾಜರಾಗುವುದು, ಶಿಕ್ಷಣವನ್ನು ಮುಂದುವರೆಸುವ ಬಗ್ಗೆ ಹೆಣ್ಣುಮಕ್ಕಳ ಮನವೊಲಿಸಲು ಕೈಗೊಳ್ಳಬೇಕಾದ ಕ್ರಮಗಳು ಮತ್ತು ಮಹಿಳೆಯರಿಗೆ ಸಂಬಂಧಿಸಿದ ಆರೋಗ್ಯ ವಿಷಯದ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಗಳನ್ನು ಸಹ "ಪೋಷಣ್ ಪಕ್ವಾಡ್" ಅಡಿಯಲ್ಲಿ ಆಯೋಜಿಸಲಾಗುವ ವಿಶೇಷ ಮಹಿಳಾ ಗ್ರಾಮ ಸಭೆಗಳಲ್ಲಿ ಚರ್ಚಿಸುವಂತೆ ಸೂಚಿಸಿದೆ.

ಆದುದರಿಂದ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ರಾಜ್ಯದ 6021 ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ ನಡೆಸುವ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

- ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಯನ್ನು ದಿನಾಂಕ:08–03–2020 ರಂದು ಅಥವಾ ಮಾರ್ಚ್ ತಿಂಗಳಿನಲ್ಲಿ ಅವಶ್ಯಕವಾಗುವ ದಿನದಂದು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಯೋಜಿಸಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.
- ಜಿಲ್ಲಾ ಮಟ್ಟದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರು ಈ ಪ್ರಕ್ರಿಯೆಗೆ ನೋಡಲ್ ಅಧಿಕಾರಿಯಾಗಿದ್ದು, ಜಿಲ್ಲಾ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯ ಯಾವುದಾದರೂ ಒಂದು ಗ್ರಾಮ ಪಂಚಾಯಿತಿಗೆ ಸದರಿ ದಿನದಂದು ಹಾಜರಿದ್ದು ಸಭೆಯಲ್ಲಿ ಭಾಗವಹಿಸಲು ಕ್ರಮವಹಿಸುವುದು.
- ತಾಲ್ಲೂಕು ಮಟ್ಟದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರು ಈ ಪ್ರಕ್ರಿಯೆಗೆ ನೋಡಲ್ ಅಧಿಕಾರಿಯಾಗಿದ್ದು, ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ತಾಲ್ಲೂಕಿನ ಯಾವುದಾದರೂ ಒಂದು ಗ್ರಾಮ ಪಂಚಾಯಿತಿಗೆ ಸದರಿ ದಿನದಂದು ಹಾಜರಿದ್ದು ಸಭೆಯಲ್ಲಿ ಭಾಗವಹಿಸಲು ಕ್ರಮವಹಿಸುವುದು.
- ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳು ಸರ್ಕಾರದ ಆದೇಶದ ಅನ್ವಯ, ವಿಶೇಷ ಸಭೆಗಳನ್ನು ಆಯೋಜಿಸಲು ಪ್ರತಿ ಗ್ರಾಮ ಪಂಚಾಯಿತಿಗೆ ನೋಡಲ್ ಅಧಿಕಾರಿಯನ್ನು ನಿಯೋಜಿಸಲು ಕ್ರಮ ವಹಿಸುವುದು.
- ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಯನ್ನು ಆಯೋಜಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶದ ಅನ್ವಯ ಸೂಕ್ತ ಕ್ರಮ ವಹಿಸುವುದು.
- ಮೇಲೆ ಆಯೋಜಿಸುವ ವಿಶೇಷ ಗ್ರಾಮಸಭೆಗಳಲ್ಲಿ ಇತರೆ ಎಲ್ಲಾ ಇಲಾಖೆಗಳ ಸ್ಥಳೀಯ ಸಿಬ್ಬಂದಿಗಳು ಕಡ್ಡಾಯವಾಗಿ ಭಾಗವಹಿಸಲು ಸೂಕ್ತ ನಿರ್ದೇಶನ ನೀಡುವುದು ಹಾಗೂ ಈ ಸಭೆಗಳಲ್ಲಿ ಗ್ರಾಮೀಣ ಪ್ರದೇಶದ ಮಹಿಳಾ ಸ್ವ ಸಹಾಯ ಗುಂಪುಗಳು ಮತ್ತು ಸಂಜೀವಿನಿ ಕಾರ್ಯಕ್ರಮದ ಸಿಬ್ಬಂದಿಗಳು ಭಾಗವಹಿಸಲು ಮಾಹಿತಿ ನೀಡುವುದು.

- ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಯ ವೀಡಿಯೋ ದಾಖಲೀಕರಣ ಮಾಡಲು ಎಲ್ಲಾ ಗ್ರಾಮ ಪಂಚಾಯಿತಿಗಳು ಕ್ರಮ ವಹಿಸುವುದು ಹಾಗೂ, ಇವುಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು ಕ್ರಮ ವಹಿಸುವುದು.
- ಪೋಷಣ್ ಅಭಿಯಾನದಡಿ ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದು, ಕಾರ್ಯಕ್ರಮದ ವಿವರಗಳನ್ನು ನೀಡುವುದು. ವಿಶೇಷವಾಗಿ 1) ಮಾತೃಪೂರ್ಣ, ಮಾತೃವಂದನಾ ಮತ್ತು ಮಾತೃಶ್ರೀ ಕಾರ್ಯಕ್ರಮಗಳು 2) ಬಾಲ್ಯವಿವಾಹ, ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಅದರ ತಿದ್ದುಪಡಿಗಳು 3) ಹೆಣ್ಣುಮಕ್ಕಳು ಅವಶ್ಯಕವಾಗಿ ಪ್ರೌಢ ಶಿಕ್ಷಣದವರೆಗೆ ಪೂರ್ಣವಾಗಿ ವ್ಯಾಸಂಗ ಮಾಡಲು ಮನವೊಲಿಸುವುದು ಹಾಗೂ ಸ್ಥಳೀಯವಾಗಿ ಸಮಸ್ಯೆಗಳು ಕಂಡುಬಂದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು. ಇದಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ಶಿಶು ಅಭಿವೃದ್ಧಿ ಯೋಜನ ಅಧಿಕಾರಿಗಳು, ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹಿತಿಯನ್ನು ಹಂಚಿಕೊಳ್ಳಲು ಅಗತ್ಯ ಕ್ರಮವಹಿಸುವುದು.
- ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ವಿಶೇಷ ಗ್ರಾಮಸಭೆಗಳ ಒಂದು ಕಿರುಚಿತ್ರವನ್ನು (15 ನಿಮಿಷಕ್ಕೆ ಮೀರದಂತೆ) ನಿರ್ಮಿಸಿ, ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸಲು ಕ್ರಮ ವಹಿಸುವುದು.

ಮೇಲ್ಕಂಡ ಅಂಶಗಳ ಆಧಾರದ ಮೇಲೆ ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಕುರಿತು ಈಗಾಗಲೇ ಸರ್ಕಾರದ ಉಲ್ಲೇಖ(2)ರ ಸುತ್ತೋಲೆಯಲ್ಲಿ ವಿವರಗಳನ್ನು ನೀಡಲಾಗಿದ್ದು, ಹೆಚ್ಚುವರಿ ಅಂಕಿಅಂಶಗಳನ್ನು ಸಂಗ್ರಹಿಸಿ ಸಭೆಯಲ್ಲಿ ಮಂಡಿಸಿ ಚರ್ಚಿಸಲು ಅನುವಾಗುವಂತೆ ಅನುಬಂಧವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಎಲ್ಲಾ ಕ್ರಮಗಳನ್ನು ವಹಿಸಿ ಯಶಸ್ವಿಯಾಗಿ ಆಯೋಜಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿಗಳ ನೋಡಲ್ ಅಧಿಕಾರಿಗಳು ಅವಶ್ಯ ಕ್ರಮಗಳನ್ನು ಕೈಗೊಳ್ಳಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಿದೆ.

28/2/2020.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

<u>ಗೆ:</u>

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

<u>ಪ್ರತಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿರವರು.
3) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## ಅನುಬಂಧ

### ಮಹಿಳೆಯರಿಗಾಗಿ ವಿಶೇಷ ಗ್ರಾಮಸಭೆ ಆಯೋಜನೆಯಲ್ಲಿ ಚರ್ಚಿಸಬಹುದಾದ ವಿಷಯಗಳು

**1. ಆರೋಗ್ಯ ವಿಷಯಗಳು:**

| ವಿಷಯಗಳು | ವಿವರಗಳು | ಸಂಖ್ಯೆ/ಶೇಕಡ/ರೂ.ಗಳು |
|---|---|---|
| ಮಕ್ಕಳ ಅಪೌಷ್ಟಿಕತೆ | ಬಾಲಕಿಯರು | |
| | ಬಾಲಕರು | |
| ಮಹಿಳೆಯರ ಅಪೌಷ್ಟಿಕತೆ | ಅವಿವಾಹಿತ ಮಹಿಳೆಯರು | |
| | ವಿವಾಹಿತ ಮಹಿಳೆಯರು | |
| ರಕ್ತ ಹೀನತೆಗೊಳಗಾದವರ ಸಂಖ್ಯೆ | 18 ವರ್ಷದೊಳಗಿನ ಮಕ್ಕಳು | |
| | 18 ವರ್ಷ ಮೇಲ್ಪಟ್ಟ ಮಹಿಳೆಯರು | |
| ಸ್ಥಳೀಯವಾಗಿ ಮಹಿಳೆಯರು ಎದುರಿಸುವ ಆರೋಗ್ಯ ಸಮಸ್ಯೆಗಳು | 1.<br>2.<br>3.<br>4.<br>5. | |
| ಸಾಂಸ್ಥಿಕ ಹೆರಿಗೆಗಳ ಸಂಖ್ಯೆ | | |
| ತಾಯಂದಿರ ಮರಣ ಸಂಖ್ಯೆ | | |
| ಶಿಶು ಮರಣ ಸಂಖ್ಯೆ | ಗಂಡು ಮಕ್ಕಳು | |
| | ಹೆಣ್ಣು ಮಕ್ಕಳು | |
| ಮಕ್ಕಳ ಮರಣ ಸಂಖ್ಯೆ | ಗಂಡು ಮಕ್ಕಳು | |
| | ಹೆಣ್ಣು ಮಕ್ಕಳು | |
| ಸಾಂಕ್ರಾಮಿಕ ರೋಗಗಳು | 1.<br>2.<br>3.<br>4. | |
| ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯ | | |
| ಕಿಶೋರಿಯರ ಆರೋಗ್ಯ | | |
| ಕುಟುಂಬ ಯೋಜನೆ ಅಳವಡಿಸಿಕೊಂಡಿರುವವರ ಸಂಖ್ಯೆ | | |
| ಪೋಲಿಯೋ ಪ್ರಕರಣಗಳು ವರದಿಯಾಗಿವೆಯೇ (ಕಳೆದ 5 ವರ್ಷಗಳಿಂದ) | | |
| ಒಟ್ಟು ವಿಶೇಷ ಚೇತನರು (ಹುಟ್ಟಿನಿಂದ ) | ಮಹಿಳೆಯರು | |
| | ಪುರುಷರು | |
| ಅಪಘಾತಗಳಿಂದ ವಿಶೇಷ ಚೇತನರಾದವರು | ಮಹಿಳೆಯರು | |
| | ಪುರುಷರು | |

## 2. ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು

| ವಿಷಯ | ವಿವರ |
|---|---|
| ಮಹಿಳೆಯರ ಸಾಕ್ಷರತೆಯ ಪ್ರಮಾಣ | |
| ಸರ್ವಶಿಕ್ಷಣ ಅಭಿಯಾನದಡಿ ಬಾಲಕಿಯರ ಸಾರ್ವತ್ರಿಕ ದಾಖಲಾತಿ ವಿವರ | |
| ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳ ಸಂಖ್ಯೆ | |
| ಕಾಲೇಜು ಮತ್ತು ಪದವಿ ಶಿಕ್ಷಣ ಪಡೆದ ಹೆಣ್ಣು ಮಕ್ಕಳ ಸಂಖ್ಯೆ | |
| ಉನ್ನತ ಶಿಕ್ಷಣ ವ್ಯಾಸಂಗ ಮಾಡಿರುವ ಮಹಿಳೆಯರ ಸಂಖ್ಯೆ | |
| ತಾಂತ್ರಿಕ ಶಿಕ್ಷಣ ಪಡೆದುಕೊಂಡಿರುವ ಮಹಿಳೆಯರ ಸಂಖ್ಯೆ | |
| ವೃತ್ತಿಪರ ಶಿಕ್ಷಣ ಪಡೆದಿರುವ ಮಹಿಳೆಯರ ಸಂಖ್ಯೆ | |
| ಶಾಲೆಗಳಲ್ಲಿ ಶೌಚಾಲಯಗಳು ಮತ್ತು ನೀರಿನ ಲಭ್ಯತೆ ಮತ್ತು ಬಳಕೆ | |
| ಶಾಲೆಗಳಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಶೌಚಾಲಯ ಲಭ್ಯತೆ | |
| ಶುದ್ಧ ಕುಡಿಯುವ ನೀರು | |
| ಶಾಲೆಯಲ್ಲಿ ಆಟದ ಮೈದಾನಗಳು | |
| ಗಣಕಯಂತ್ರಗಳ ಸೌಕರ್ಯಗಳು | |
| ವಿಜ್ಞಾನ ಪ್ರಯೋಗಾಲಯ, ಶಾಲಾ ಗ್ರಂಥಾಲಯ | |
| ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣ-ಯಾವುವು | |
| ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ | |
| ಎಸ್.ಎಸ್.ಎಲ್.ಸಿಯಲ್ಲಿ ಪಾಸಾದ ಹೆಣ್ಣುಮಕ್ಕಳ ಶೇಖಡವಾರು ಪ್ರಮಾಣ | |
| ವಿಶೇಷ ಚೇತನರಿಗೆ ನೀಡಬಹುದಾದ ಸೌಕರ್ಯಗಳು | |
| ಎಸ್.ಡಿ.ಎಂ.ಸಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರ ಸಂಖ್ಯೆ | |
| ಗ್ರಾಮದಲ್ಲಿ ಸಾರ್ವಜನಿಕ ಆಟದ ಮೈದಾನದ ಲಭ್ಯತೆ | |
| ಸಾರ್ವಜನಿಕ ಗ್ರಂಥಾಲಯಗಳು | |
| ಹವ್ಯಾಸಿ ಮಹಿಳಾ ಕಲಾತಂಡಗಳು | |
| ಸಾಂಪ್ರದಾಯಿಕ ಕಲೆಗಳ ಸಂರಕ್ಷಣೆಯಲ್ಲಿ ಮಹಿಳೆಯರು | |
| ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಅಕ್ಷರ ಜ್ಞಾನ ಪಡೆಯುತ್ತಿರುವ ಮಹಿಳೆಯರು | |
| ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಗ್ರಾಮದ ಮಹಿಳೆಯರು | |

3. ಸಬಲೀಕರಣ :

ಆರ್ಥಿಕ ಸಬಲೀಕರಣ

| ವಿಷಯ | ವಿವರ |
|---|---|
| ಮಹಿಳಾ ಮುಖ್ಯಸ್ಥರನ್ನು ಹೊಂದಿರುವ ಕುಟುಂಬಗಳ ಸಂಖ್ಯೆ | |
| ನರೇಗಾ ಯೋಜನೆಯಡಿ ಕೆಲಸದ ಚೀಟಿಗಳನ್ನು ಹೊಂದಿರುವ ಮಹಿಳೆಯರ ಸಂಖ್ಯೆ | |
| ಕೃಷಿ ಜಮೀನಿನ ಒಡೆತನ ಹೊಂದಿರುವ ಮಹಿಳೆಯರ ಸಂಖ್ಯೆ | |
| ಮಹಿಳಾ ಕೃಷಿಕರ ಸಂಖ್ಯೆ | |
| ಮಹಿಳಾ ಕೂಲಿ ಕಾರ್ಮಿಕರ ಸಂಖ್ಯೆ | |
| ಕೃಷಿ ಕಾರ್ಮಿಕ ಮಹಿಳೆಯರು & ಅವರ ಕೂಲಿ | |
| ಕಟ್ಟಡ ಕಾರ್ಮಿಕ ಮಹಿಳೆಯರು & ಅವರ ಕೂಲಿ | |
| ಗ್ರಾಮದಲ್ಲಿ ವಾಸವಿದ್ದು ಮಾಸಿಕ ನಿರ್ದಿಷ್ಟ ಆದಾಯ ನೀಡುವ ಉದ್ಯೋಗಕ್ಕಾಗಿ ಗ್ರಾಮದಿಂದ ಹೊರಗೆ ಹೋಗುವ ಮಹಿಳೆಯರು | |
| ಗ್ರಾಮದಲ್ಲಿರುವ ಮಹಿಳಾ ಸ್ವ ಸಹಾಯ ಗುಂಪುಗಳು | |
| ಗ್ರಾಮದಲ್ಲಿರುವ ಒಟ್ಟು ಸ್ವ ಸಹಾಯ ಸಂಘದ ಮಹಿಳೆಯರ ಸಂಖ್ಯೆ | |
| ಜೀವನೋಪಾಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆ | |
| ಹೈನುಗಾರಿಕೆ | |
| ಆಹಾರೋತ್ಪನ್ನ ಚಟುವಟಿಕೆ | |
| ಹೊಲಿಗೆ ಯಂತ್ರ | |
| ಅಗರಬತ್ತಿ ತಯಾರಿಕೆ | |
| ಆಟೋರಿಕ್ಷಾ | |
| ಬ್ಯೂಟೀಷಿಯನ್ ಕೋರ್ಸ್ | |
| ಕಂಪ್ಯೂಟರ್ ತರಬೇತಿ | |
| ಸಾವಯವ ಬೇಸಾಯ ಮತ್ತು ಸಿರಿಧಾನ್ಯಗಳ ವ್ಯವಸಾಯ | |
| ಇತರೆ ಕೆಲಸಗಳು | |
| ಸ್ಥಳೀಯ ಸಹಕಾರಿ ಸಂಘಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ | |
| ಹಾಲು ಉತ್ಪಾದಕರ ಸಂಘ | |
| ಕೃಷಿ ಪತ್ತಿನ ಸಹಕಾರ ಸಂಘ | |
| ಮಹಿಳಾ ಬ್ಯಾಂಕ್ | |
| ಸ್ವಯಂ ಸೇವಾ ಸಂಸ್ಥೆಗಳು | |
| ಮಹಿಳೆಯರ ಮಾಸಿಕ ಆದಾಯ | |

4. **ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು:** ಈ ಕೆಳಕಂಡ ವಿಷಯಗಳ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿ ಪರಿಚಯಿಸುವುದು.

| |
|---|
| ಮಹಿಳಾ ಸಹಾಯವಾಣಿ-1091 |
| ಮಾನವ ಸಾಗಾಣಿಕೆ ತಡೆ ಕಾಯಿದೆ. |
| ಸಮಾನ ಕೆಲಸಕ್ಕೆ ಸಮಾನ ವೇತನ ಕಾಯಿದೆ, |
| ಕನಿಷ್ಟ ವೇತನ ಕಾಯಿದೆ. |
| ಭ್ರೂಣ ಲಿಂಗಪತ್ತೆ & ಭ್ರೂಣಹತ್ಯೆ ನಿಷೇಧ ಕಾಯಿದೆ |
| ಬಾಲ್ಯ ವಿವಾಹ ನಿಷೇಧ ಕಾಯಿದೆ |
| ವರದಕ್ಷಿಣೆ ನಿಷೇಧ ಕಾಯಿದೆ |
| ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನಿಷೇಧ ಕಾಯಿದೆ |
| ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆ |
| ವಿಶೇಷ ವಿವಾಹ ಕಾಯ್ದೆ |
| ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು ಕಾಯಿದೆ |
| ಮಹಿಳಾ ಮೀಸಲಾತಿ ಕಾಯಿದೆ. (ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ) |
| ಸಾಂವಿಧಾನಿಕ ಹಕ್ಕುಗಳು |
| ಮಹಿಳಾ ಆಯೋಗ |

5. **ಸಾಮಾಜಿಕ ಪಿಡುಗುಗಳು**

| ವಿಷಯ | ವಿವರ |
|---|---|
| ಬಾಲ್ಯ ವಿವಾಹಗಳ ಸಂಖ್ಯೆ | |
| ವರದಕ್ಷಿಣೆ ಕಿರುಕುಳಗಳ ಸಂಖ್ಯೆ | |
| ವರದಕ್ಷಿಣೆ ಸಾವುಗಳ ಸಂಖ್ಯೆ | |
| ದೈಹಿಕ ಹಿಂಸೆ & ಮಾನಸಿಕ ಹಿಂಸೆಗಳ ಸಂಖ್ಯೆ | |
| ಲೈಂಗಿಕ ಕಿರುಕುಳಗಳು ವರದಿಯಾಗಿರುವ ಸಂಖ್ಯೆ | |
| ದೇವದಾಸಿ ಪದ್ಧತಿ | |
| ಜೀತಪದ್ಧತಿ | |
| ಇತರೆ- ಚರ್ಚಿಸಿ | |
| | |

6. **ಪಂಚಾಯತ್ ರಾಜ್ ಸಂಸ್ಥೆಗಳೊಂದಿಗಿನ ಒಡನಾಟ**

| ವಿಷಯ | ವಿವರ |
|---|---|
| ಗ್ರಾಮ ಪಂಚಾಯಿತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಬೇಡಿಕೆಗಳು | 1.<br>2.<br>3.<br>4.<br>5. |
| ಗ್ರಾಮ ಪಂಚಾಯಿತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ. | 1.<br>2. |

| | |
|---|---|
| | 3.<br>4.<br>5. |
| ಪಂಚಾಯಿತಿಯು ಆಯೋಜಿಸಿದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ | 1.<br>2.<br>3.<br>4.<br>5. |
| ಲಿಂಗಾಧಾರಿತ ಆಯವ್ಯಯವನ್ನು ಪಂಚಾಯಿತಿಯು ಸಿದ್ಧಪಡಿಸಿರುವ ವಿವರ | 1.<br>2.<br>3.<br>4.<br>5. |
| ಗ್ರಾಮದ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ವಿಶೇಷ ಸಾಧನೆಗಳ ವಿವರ | 1.<br>2.<br>3.<br>4.<br>5. |
| ವಿವಿಧ ಯೋಜನೆಗಳಲ್ಲಿ ಆಯ್ಕೆಯಾದ ಮಹಿಳಾ ಫಲಾನುಭವಿಗಳ ವಿವರ | 1.<br>2.<br>3.<br>4.<br>5. |
| ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು | 1. ಮನಸ್ವಿನಿ<br>2. ಪರಿತ್ಯಕ್ತ ಮಹಿಳೆ/ಒಂಟಿ ಮಹಿಳೆ<br>3. ಮಹಿಳಾ ಪ್ರಧಾನ ಕುಟುಂಬಗಳು<br>4. ವಿಧವೆಯರು<br>5. ಅಂಗವಿಕಲರು<br>6. ತೃತೀಯ ಲಿಂಗಿಗಳು<br>7. ವೃದ್ಧರು |
| ಇತರೆ ವಲಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ. | |